ಆದ್ದರಿಂದ ಈ ಪೋಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಅತ್ಯಂತ ನೋವಾಗಿದೆ. ಬೆಂಗಳೂರಿನ ಜನರಿಗೆ ಆಗಿರತಕ್ಕ ನೋವು, ಬೆಂಗಳೂರಿನ ಜನ ಓಡಾಡುವುದಕ್ಕೆ ಆಗುತ್ತಿಲ್ಲ. ಭಯ ಭೀತಿಯಿಂದ ಇದ್ದಾರೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಕಾಗೋಡು ತಿಮ್ಮಪ್ಪ : ಚರ್ಚೆ ಆಗಬೇಕು ಎಂದು ಹೇಳುತ್ತಿದ್ದಾರೆ. ಚರ್ಚೆ ಆಗುವಂತಹ ಸಂದರ್ಭದಲ್ಲಿ ಎದ್ದು ಹೊರಗೆ ಹೋಗುತ್ತಿದ್ದಾರೆ. ಈಗ ನೀವು ಚರ್ಚೆ ಮಾಡಿದ್ದನ್ನು ನಾವು ಕೇಳಿದ್ದೇವೆ, ನಾವು ಚರ್ಚೆ ಮಾಡುವುದನ್ನು ನೀವು ಕೇಳಬೇಕಲ್ಲಾ.

ಅಧ್ಯಕ್ಷರು : ಶ್ರೀರಾಮರೆಡ್ಡಿಯವರು ಹೂಳು ಎತ್ತಬೇಕು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಮಗೆ ಗೊತ್ತಿದೆ. ಇಷ್ಟು ಲಘುವಾಗಿ ಮಾತನಾಡತಕ್ಕದ್ದು ಅಲ್ಲ. ಅನೇಕ ಸಾರಿ ಖಾಸಗಿಯಾಗಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಬೆಂಗಳೂರು ಏನಾಗಿದೆ, ಏನು ಪರಿಸ್ಥಿತಿ ಆಗಿದೆ ಎಂದು ನಾವು ಅನೇಕ ಸಾರಿ ಭೇಟಿ ಮಾಡಿ ಮಾತನಾಡಿದ್ದೇವೆ. ಇವತ್ತು ಬೆಂಗಳೂರಿನ ಜನ ನಿಜವಾಗಿಯೂ ಭಯ ಭೀತರಾಗಿದ್ದಾರೆ.

ಅಧ್ಯಕ್ಷರು : ವಾಪಸ್ ಹೋದವರನ್ನು ಕರೆದುಕೊಂಡು ಬಂದು ನನಗೆ ತೊಂದರೆ ಮಾಡಿದಿರಿ.

ಶ್ರೀ ಕಾಗೋಡು ತಿಮ್ಮಪ್ಪ : ವಾಪಸ್ ಹೋಗಿದ್ದಕ್ಕಾದರೂ ಬಂದು ಏನಾದರೂ ಹೇಳಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ನಾನು ಹಿರಿಯ ಸದಸ್ಯರು ಎಂದು ಬಹಳ ಗೌರವ ಕೊಡುತ್ತೇನೆ. ಅವರು ಈ ತೀರ್ಮಾನಕ್ಕೆ ಬರುವುದಾದರೆ ಬಹಳ ಕಷ್ಟ.

ಶ್ರೀ ಕಾಗೋಡು ತಿಮ್ಮಪ್ಪ : ನಾನೂ ಗೌರವ ಕೊಟ್ಟು ಹೇಳುತ್ತಿದ್ದೇನೆ. ನಿಮಗೆ ಸಪೋರ್ಟ್ ಮಾಡುತ್ತಿದ್ದೇನೆ. ನಾವು ಹೇಳುವುದನ್ನು ನೀವು ಕೇಳಬೇಕಲ್ಲಾ. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿರತಕ್ಕಂಥ ಮಾತಿನಲ್ಲಿ ಸತ್ಯ ಇದೆ. ಬೆಂಗಳೂರು ನಗರದಲ್ಲಿ ಪೋಲೀಸ್ ನವರದ್ದೇ ಒಂದು ವೆಸ್ಟೆಡ್ ಇಂಟರೆಸ್ಟ್ ಕ್ರಿಯೇಟ್ ಆಗಿದೆ. ಏನೆಂದರೆ ಕೆಂಗೇರಿ ಸ್ಟೇಷನ್‌ನಿಂದ ಕಬ್ಬನ್ ಪಾರ್ಕ್, ಕಬ್ಬನ್ ಪಾರ್ಕಿನಿಂದ ಬಿನ್ನಿ ಪೇಟೆ, ಬಿನ್ನಿಪೇಟೆಯಿಂದ ಕಬ್ಬನ್ ಪಾರ್ಕ್. ಕಳೆದ 20 ವರ್ಷಗಳಿಂದ ಕಾನ್‌ಸ್ಟೇಬಲ್‌ನಿಂದ ಹಿಡಿದು ಸರ್ಕಲ್ ಇನ್ಸ್‌ಪೆಕ್ಟರ್‌ವರೆಗೆ ಇವರು ಬೆಂಗಳೂರು ನಗರ ಬಿಟ್ಟು ಹೊರಗೆ ಹೋಗಿಯೇ ಇಲ್ಲ. ಅದು ರೋಷನ್ ಬೇಗ್ ಅವರು ಬರಲಿ, ಬೇರೆಯವರು ಬರಲಿ. ಹಿಂದಿನ ಮುಖ್ಯಮಂತ್ರಿಗಳು ಇದ್ದರು, ಹೋಮ್ ಮಿನಿಸ್ಟರ್ ಪಕ್ಕದಲ್ಲಿಯೇ ಇರುತ್ತಾರೆ, ಒಬ್ಬ ಸಬ್ ಇನ್ಸ್‌ಪೆಕ್ಟರ್ ಕಂಡ ಕೂಡಲೇ ಹಲೋ ಎಂದು ಹೇಳುತ್ತಾರೆ. ಯಾರೋ ಒಬ್ಬರು ನಿಮ್ಮಂಥವರು ಸುಮ್ಮನೆ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಆನ್ನಿಸುತ್ತದೆ ನಾವು ಭದ್ರತೆಯನ್ನು ಪ್ರಾಮಾಣಿಕವಾಗಿ ಚಿಂತನೆ ಮಾಡಲಿಲ್ಲ - ಎಂದು ಹೇಳಿದರೆ ಇದರಲ್ಲಿ ರಾಜಕೀಯ ಮಾಡುವುದು ಬೇಡ. ನಾವೇನೂ

ರಾಜಕೀಯ ಮಾಡುತ್ತಿಲ್ಲ. ಬೆಂಗಳೂರು ಸಿಟಿ ನಿಜವಾಗಿಯೂ ಬೆಂಕಿ ಬೀಳುತ್ತಿದೆ, ನನಗೆ ಅನಿಸುತ್ತಿದೆ, ಭಯ ಭೀತಿ ಬರುತ್ತಿದೆ. ಆ ದೃಷ್ಟಿಯಿಂದ ನೀವು ವಿಫಲವಾಗಿದ್ದೀರಿ ಎಂದು ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಕಾಗೋಡು ತಿಮ್ಮಪ್ಪ : ಸ್ವಲ್ಪ ನಿಲ್ಲಿ. ಇವರು ಹೇಳಿದ್ದನ್ನು ನಾವು ಕೇಳಿದ್ದೇವೆ, ನಾವು ಹೇಳುವುದನ್ನು ಇವರು ಕೇಳಲಿ. ನಾವು ಹೇಳುವುದನ್ನು ಮಾತ್ರ ಇವರು ಕೇಳಬಾರದೇ?

ಶ್ರೀ ಎಚ್. ಎನ್. ನಂಜೇಗೌಡ : ಮಾನ್ಯ ವಾಟಾಳ್ ಅವರಿಗೆ ತೊಂದರೆ ಕೊಡುವುದು ಬೇಡ, ಅವರಿಗೇನೋ ಕೆಲಸ ಇದೆ - ಅರ್ಜೆಂಟ್.

ಅಧ್ಯಕ್ಷರು : ಈಗ ಅವರು ಬಂದರೆ ನನಗೆ ಕಷ್ಟ ಆಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರು ನನ್ನ ಆತ್ಮೀಯರಾಗಿರಬಹುದು, ಅವರು ಸ್ನೇಹಿತರಾಗಿರಬಹುದು. ನಾನು ಒಂದು ವಿಚಾರ ಹೇಳುತ್ತೇನೆ. ಈ ತರಹ ಮಾತನಾಡುವುದರಿಂದ ಇದೇನೂ ಒಳ್ಳೆಯದಲ್ಲ. ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇದು ಬಹಳ ಪ್ರಾಮುಖ್ಯವಾದ ವಿಚಾರ ಎಂದು ಹೇಳುತ್ತಿದ್ದೇವೆ, ಅದಕ್ಕೆ ಒಂದು ಗಾಂಭೀರ್ಯತೆ ಬರಲಿ ಎಂದು ಹೇಳಿದರೆ ನನಗೇನಾದರೂ ಕೆಲಸ ಇದೆಯೇ? ಯಾವ ಕೆಲಸ? ಯಾವತ್ತಾದರೂ ಜನುಮದಲ್ಲಿ 11 ಗಂಟೆಗೆ ಬಂದರೆ ನಾನು 6 ಗಂಟೆಗೇ ಎದ್ದು ಹೋಗುವುದು. ಇವರ ತರಹ ನಾನು ವಾರಕ್ಕೆ ಒಂದು ಸಾರಿ ಬರುವುದಿಲ್ಲ. ವಾರಕ್ಕೆ ಒಮ್ಮೆ ಸಭೆಗೆ ಬರುವುದು, ಇಲ್ಲಿ ಹೇಳುವುದು.

(ಮಾನ್ಯ ವಾಟಾಳ್ ಸಭೆಯಿಂದ ಹೊರಗೆ ನಡೆದರು)

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳಾದ ರೋಷನ್ ಬೇಗ್ ಅವರು ಬೆಂಗಳೂರಿನವರು. ಅವರಿಗೆ ಒಳಗೂ ಗೊತ್ತು, ಹೊರಗೂ ಗೊತ್ತು. ಗೊತ್ತಿಲ್ಲದೇ ಇರತಕ್ಕದ್ದು ಏನೂ ಇಲ್ಲ.

ಅಧ್ಯಕ್ಷರು : ಈಗ ಮಾನ್ಯ ತಿಮ್ಮಪ್ಪನವರೇ, ನಾವು ಮಾತನಾಡಿಕೊಳ್ಳೋಣ. ರೋಶನ್ ಬೇಗ್ ಅವರಿಗೆ he has got his own limitations. ಸರ್ಕಾರ ಯಾರದ್ದೇ ಇರಲಿ. ಮಾನ್ಯ ಮೊಯಲಿಯವರು ಮಾನ್ಯ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿದಂತಹವರು, ಹೇಗೆ ಹೇಗೆ ಒತ್ತಡಗಳು ಬರುತ್ತವೆ? ಅವುಗಳಿಗೆ ಯೀಲ್ಡ್ ಆಗದೇ ಇದರೆ ಯಾವ ರೀತಿ ತೊಂದರೆ ಕೊಡುತ್ತಾರೆ ಎಂದು ಎಲ್ಲವನ್ನೂ ನೋಡಿರತಕ್ಕವರು. ನಾವು ಎಲ್ಲೋ ಒಂದು ಕಡೆಗೆ ನಿರ್ಲಜ್ಜಿತರಾಗಿ ಇವಕ್ಕೆಲ್ಲಾ ಪ್ರೋತ್ಸಾಹ ಕೊಡುತ್ತೇವೆ. ಅಂಥಹ ಅಧಿಕಾರಿಗಳಿಗೆಲ್ಲಾ ನಾವೇ ಸಮರ್ಥನೆ ಮಾಡುತ್ತೇವೆ. ನಮಗೆ ಜಾತಿಯೋ, ಕುಲವೋ ಅಥವಾ ಬಂಧುತ್ವವೋ ಏನೋ ಒಂದು ನಿರ್ಬಂಧ ಇರುತ್ತದೆ. ಶಾಸಕರು ಬಂದು